ಯಾಗಗಳಲ್ಲಿ ಮದ್ಯಸೇವನೆ ಒಂದು ವಿಧಿಯಾಗಿತ್ತು; ಕ್ರೈಸ್ತರಲ್ಲಿ ಪ್ರಾರ್ಥನೆಯ ಭಾಗವಾಗಿ ವೈನುಸೇವನೆಯಿದೆ. ಫಕೀರರಲ್ಲಿ ಭಂಗಿಪಾನ ಸಾಮಾನ್ಯ. ಕೆಲವು ಸಮುದಾಯಗಳಲ್ಲಿ ನಿಶ್ಚಿತಾರ್ಥ ಮಾಡುವಾಗ ಹೆಣ್ಣಿನವರಿಗೆ ಗಂಡಿನ ಕಡೆಯವರು ಇಂತಿಷ್ಟು ಗಡಿಗೆ ಹೆಂಡ ಒದಗಿಸಬೇಕೆಂದು ಲೇಖೀ ಒಪ್ಪಂದಗಳೇ ಆಗುತ್ತವೆ. ಒಂದು ಗಡಿಗೆ ಕಡಿಮೆಯಾದರೆ ಮದುವೆಯೇ ನಿಂತುಹೋಗಬಹುದು; ಬೀಗರು ಬಡಿದಾಡಿ ಗಾಯಗೊಂಡು ಆಸ್ಪತ್ರೆಗೆ ಹೋಗಬಹುದು. ಹಿರಿಯರ ಹಬ್ಬದಲ್ಲಿ ದಿವಂಗತರು ಸೇವಿಸುತ್ತಿದ್ದ ಬ್ರಾಂಡಿನ ಪಾನ ಮತ್ತು ಬೀಡಿಗಳನ್ನು ಎಲ್ಲಿದ್ದರೂ ಹುಡುಕಿತಂದು ಎಡೆಗಿಡುವ ಪದ್ಧತಿಯಂತೂ ಚಿರಪರಿಚಿತವಾಗಿದೆ. ಯಾವ ಶಾಸ್ತ್ರವನ್ನು ಪಾಲಿಸದಿದ್ದರೂ, ನಾಸ್ತಿಕರಾಗಿದ್ದ ಲಂಕೇಶರನ್ನು ಮಣ್ಣುಮಾಡುವಾಗ ಸಮಾಧಿಯೊಳಗೆ ಸ್ಕಾಚ್‌ವಿಸ್ಕಿಯ ಸೀಸೆಯನ್ನು ಇಡಲಾಯಿತು. ಇದು ಮದ್ಯವು ನಮ್ಮ ಸಂಸ್ಕೃತಿಯಲ್ಲಿ ಬಿಟ್ಟಿರುವ ಆಳವಾದ ಬೇರನ್ನೂ ಅಚಲವಾದ ಅದರ ಸ್ಥಾನವನ್ನೂ ಸಾಬೀತುಪಡಿಸುತ್ತದೆ.

ಮದ್ಯವು ಆರಾಧನ ಲೋಕದಲ್ಲಿ ಹೀಗೆಲ್ಲ ಗೌರವಾನ್ವಿತವಾಗಿದ್ದರೂ, ಇದಕ್ಕೆಂದೇ ವಿಶಿಷ್ಟ ಸಂಸ್ಕೃತಿಯನ್ನು ರೂಪಿಸಿದ ಕೀರ್ತಿ ಪಾಶ್ಚಿಮಾತ್ಯರಿಗೆ ಸಲ್ಲಬೇಕು. 'ಟೇಬಲ್ ಮ್ಯಾನರ್ಸ್' ಹೆಸರಲ್ಲಿರುವ ಈ ಸಭ್ಯಾಚಾರವು ಅಲಿಖಿತ ಸಂವಿಧಾನದಂತೆ ರೂಪುಗೊಂಡಿದೆ. ಗೋಷ್ಠಿಯಲ್ಲಿ ಎಲ್ಲರೂ ತಮಗಿಷ್ಟದ ಪಾನೀಯವನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯವಿದ್ದರೆ ಲಘುಪಾನಿಗಳ ಬಗ್ಗೆ ಸದಭಿಪ್ರಾಯವಿಲ್ಲ. ಕಾರಣ, ಅವರು ಬುದ್ಧಿಯನ್ನು ಜಾಗ್ರತಾವಸ್ಥೆಯಲ್ಲಿಟ್ಟುಕೊಂಡು ಹೈಕಮಾಂಡಿನಿಂದ ಬಂದ ವೀಕ್ಷಕರಂತೆ ಪಾರ್ಟಿಗಳಲ್ಲಿ ಕೂರುವುದು, ಕಡುಪಾನಿಗಳ

